ಮಳವಳ್ಳಿ ಆಸ್ಪತ್ರೆಯಲ್ಲಿ ಬಹಳಷ್ಟು ಕಡಿಮೆ ಇದ್ದಾರೆ. ಆದರೆ ಡಾಕ್ಟರ್ಸ್ ಸ್ವಲ್ಪ ಕಡಿಮೆಯಾದರೂ ಪರವಾಗಿಲ್ಲ ನರ್ಸ್‌ಗಳು ಹೆಚ್ಚಾಗಿ ಬೇಕಾಗಿದೆ. ದಯಮಾಡಿ ಸರ್ಕಾರ ಇದರ ಬಗ್ಗೆ ಗಮನಹರಿಸಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡುತ್ತೇನೆ.

ಶ್ರೀ ಆರ್. ಅಶೋಕ್ : ಮಾನ್ಯ ಅಧ್ಯಕ್ಷರೇ, ಸರ್ಕಾರ 2700 ಪ್ಯಾರಾ ಮೆಡಿಕಲ್ ಸ್ಟ್ಯಾಫ್‌ನ್ನು ತೆಗೆದುಕೊಳ್ಳಬೇಕೆನ್ನುವ ತೀರ್ಮಾನವನ್ನು ಸರ್ಕಾರ ಈಗಾಗಲೇ ತೆಗೆದುಕೊಂಡಿರುವುದರಿಂದ ಆ ನೇಮಕಾತಿಯಾದಾಗ ಈ ಹುದ್ದೆಗಳನ್ನು ತುಂಬುವಂತಹ ವ್ಯವಸ್ಥೆಯನ್ನು ಮಾಡುತ್ತೇನೆ. ಅದೇ ರೀತಿ ಮಾನ್ಯ ಎಂ. ಶ್ರೀನಿವಾಸ್‌ರವರು ಏನು ಮೇಲ್ದರ್ಜೆಗೇರಿಸಬೇಕು ಎನ್ನುವ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ ಅದನ್ನು ಪರಿಶೀಲನೆ ಮಾಡಿ ನಾನು ಅದಷ್ಟು ಶೀಘ್ರವಾಗಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಗ್ರಾಮೀಣ ಪ್ರದೇಶದಲ್ಲಿನ ಹರಿಜನರ ವಾರ್ಡುಗಳ ಅಭಿವೃದ್ಧಿ ಬಗ್ಗೆ.

329(691) ಶ್ರೀ ಕ್ಯಾತ್ಸಂದ್ರ ಎನ್ ರಾಜಣ್ಣ (ಬೆಳ್ಳಾವಿ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಗ್ರಾಮೀಣ ಪ್ರದೇಶದ ಹರಿಜನ ವಾರ್ಡುಗಳ ಅಭಿವೃದ್ಧಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;

ಆ) ಈ ಸಾಲಿನ ಆಯವ್ಯಯದಲ್ಲಿ ಈ ಕಾರ್ಯಕ್ರಮಗಳನ್ನು ಪೂರೈಸಲು ತೆಗೆದುಕೊಂಡಿರುವ ಕ್ರಮಗಳೇನು (ಸಂಪೂರ್ಣ ವಿವರ ಒದಗಿಸುವುದು)?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :

ಅ) 2006–07ನೇ ಸಾಲಿನ ಲೆಕ್ಕ ಶೀರ್ಷಿಕೆ 2225–01–800–0–01 (ರಾಜ್ಯ ಯೋಜನೆ ಯಡಿಯಲ್ಲಿ ಪರಿಶಿಷ್ಟ ಜಾತಿಯ ಕಾಲೋನಿಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮದಡಿ ರೂ. 1552.95 ಲಕ್ಷಗಳನ್ನು ಒದಗಿಸಲಾಗಿದೆ.

ಆ) 2006–07ನೇ ಸಾಲಿನ ಆಯವ್ಯಯದ ರಾಜ್ಯ ಯೋಜನೆಯಡಿ 27 ಜಿಲ್ಲೆಗಳಿಗೆ ಒಟ್ಟು ರೂ. 1552.95 ಲಕ್ಷಗಳನ್ನು ಒದಗಿಸಲಾಗಿದ್ದು, ವಿಶೇಷ ಘಟಕ ಯೋಜನೆಯಡಿಯಲ್ಲಿ ಪರಿಶಿಷ್ಟ ಜಾತಿ ಕಾಲೋನಿಗಳಲ್ಲಿ ರಸ್ತೆ, ಚರಂಡಿ, ಕಿರುನೀರು ಸರಬರಾಜು ಮುಂತಾದ ಯೋಜನೆಗಳನ್ನು ಕೈಗೊಂಡು ಪರಿಶಿಷ್ಟ ಜಾತಿಯ ಜನಗಳಿಗೆ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಲಾಗಿದೆ.

ಶ್ರೀ ಕ್ಯಾತಸಂದ್ರ ಎನ್ ರಾಜಣ್ಣ : ಮಾನ್ಯ ಅಧ್ಯಕ್ಷರೇ, ಉತ್ತರ ಬಂದಿದೆ. 2006–07ನೇ ಸಾಲಿನಲ್ಲಿ 15 ಕೋಟಿ 52 ಲಕ್ಷ 95 ಸಾವಿರ ರೂ. ಒದಗಿಸಲಾಗಿದೆ ಪರಿಶಿಷ್ಟ

ಜಾತಿ ಮತ್ತು ಪರಿಶಿಷ್ಟ ಪಂಗಡಗಳಲ್ಲಿ ಮೂಲಭೂತ ಸೌಕರ್ಯ ಅಭಿವೃದ್ಧಿ ಕಾರ್ಯ ಕ್ರಮದ ಅಡಿಯಲ್ಲಿ ಅಂತ ಹೇಳಿದ್ದಾರೆ. ಇದರಲ್ಲಿ 2004–05ರಲ್ಲಿ ಎಷ್ಟು ಇದೆ? 2005–06ರಲ್ಲಿ ಎಷ್ಟಿದೆ ಎನ್ನುವ ಒಂದು ಮಾಹಿತಿ ಬೇಕು. ನಾನು ಪ್ರಶ್ನೆಯನ್ನು ಕೇಳಿರತಕ್ಕಂಥ ಮೂಲ ಉದ್ದೇಶ ಪ್ರತಿ ವರ್ಷ ಕೂಡ ಈ ಮೂಲಭೂತ ಸೌಕರ್ಯಕ್ಕೆ ಹಣವನ್ನು ಪೂಲ್ಡ್ ಫಂಡ್ಸ್‌ನಲ್ಲಿ ಇಡುತ್ತಾರೆ. ಬೇರೆ ಬೇರೆ ಕೆಲಸಕ್ಕೆ ಬಾರದೇ ಇರತಕ್ಕಂಥ ಯಾವುದೋ ಡ್ರೈನೇಜ್ ಮಣ್ಣು ಮಸಿ ಅಂತ ಹೇಳಿ 10 ಕೋಟಿ ರೂ ಇದ್ದುದ್ದನ್ನು ಇವತ್ತು 80 ಕೋಟಿ ರೂ ವರೆಗೂ ತೆಗೆದುಕೊಂಡು ಹೋಗಿದ್ದಾರೆ. ಆದರೆ ಮೂಲಭೂತ ಸೌಕರ್ಯಗಳನ್ನು ಒದಗಿಸತಕ್ಕಂಥಾದ್ದರಲ್ಲಿ ಬರೀ ಚರಂಡಿ ರಸ್ತೆ ಮಾಡಿಸುವುದರ ಜೊತೆಗೆ ಈ ಅಂಬೇಡ್ಕರ್, ಸಣ್ಣ ಸಣ್ಣ ಸಮುದಾಯ ಭವನಗಳನ್ನು ಆಯಾಯಾ ಕಡೆಗಳಲ್ಲಿ ಕಟ್ಟಿ ಕೊಡುವಂತಹ ಪದ್ಧತಿ ಇತ್ತು. ಇವತ್ತು ಈಗಾಗಲೇ ಒಂದು ವರ್ಷ ಎರಡು ವರ್ಷದಿಂದ ಆ ಸಂಪ್ರದಾಯವನ್ನು ಬಿಟ್ಟು ಆ ಕೆಲಸಗಳೇ ಮಾಡುತ್ತಿಲ್ಲ. ಆದ್ದರಿಂದ ಅಲ್ಲಿ 80 ಕೋಟಿ ರೂ ವರೆಗೂ ಹಣ ಇಟ್ಟು ಅದು ಬೇರೆ ಬೇರೆ ಹೆಸರಿನಲ್ಲಿ ಹಣ ಪೋಲಾಗುತ್ತಿರತಕ್ಕಂಥದ್ದನ್ನು ನಾವು ನೋಡುತ್ತಿದ್ದೇವೆ. ಅದರ ಬದಲಾಗಿ ರಾಜ್ಯದಲ್ಲಿರತಕ್ಕಂಥ ಹರಿಜನ ವಾಡಿಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಿ ಇನ್ನೂ ಹೆಚ್ಚು ಹಣ ನಿಗದಿ ಮಾಡಬೇಕು ಎನ್ನುವುದಕೋಸ್ಕರ ನಾನು ಈ ಪ್ರಶ್ನೆಯನ್ನು ಹಾಕಿರುವುದು. ಇದರ ಬಗ್ಗೆ ಮಾನ್ಯ ಸಚಿವರು ನನಗೆ ಮಾಹಿತಿಯನ್ನು ಕೊಡಬೇಕಾಗುತ್ತದೆ.

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) : ಮಾನ್ಯ ಅಧ್ಯಕ್ಷರೇ, ಹಿರಿಯ ಸದಸ್ಯರಾದ ಶ್ರೀ ರಾಜಣ್ಣನವರು 2006–07ನೇ ಸಾಲಿಗೆ ಬಿಡುಗಡೆ ಮಾಡಿರುವ ಹಣದ ಬಗ್ಗೆ ಮಾತನಾಡಿ ಬಹಳ ಕಡಿಮೆ ಆಗಿದೆ ಜಾಸ್ತಿ ಕೊಡಬೇಕೆಂದು ಹೇಳಿ ಒತ್ತಾಯ ಮಾಡಿದ್ದಾರೆ. ಆದರೆ ಮಾನ್ಯ ಅಧ್ಯಕ್ಷರೇ, ಪರಿಶಿಷ್ಟ ಜಾತಿ ಕಾಲೋನಿಗಳಲ್ಲಿ ಮೂಲ ಭೂತ ಸೌಕರ್ಯ ಅಭಿವೃದ್ಧಿ ಕಾರ್ಯಕ್ರಮದಲ್ಲಿ ಈ ಕಾರ್ಯಕ್ರಮಕ್ಕೆ ಅಲ್ಲಿನ ಪಂಚಾಯತಿ ಅನುಷ್ಠಾನಗೊಳಿಸುತ್ತದೆ. ಹಣಕಾಸು ಇಲಾಖೆಯಿಂದ ನೇರವಾಗಿ ದುಡ್ಡು ಜಿಲ್ಲಾ ಪಂಚಾಯತಿಗೆ ಹೋಗುತ್ತದೆ. ಜಿಲ್ಲಾ ಪಂಚಾಯತಿ ಮುಖಾಂತರ ತಾಲ್ಲೂಕು ಪಂಚಾಯತಿಗೆ ಹೋಗುತ್ತದೆ. ಅದಕ್ಕೆ ಮಾನ್ಯ ಸದಸ್ಯರು ಮೂಲಭೂತ ಸೌಕರ್ಯಕ್ಕೆ ಹೆಚ್ಚು ಹಣ ಬಿಡುಗಡೆ ಮಾಡಬೇಕೆಂದು ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಇದಕ್ಕೆ ಇನ್ನೂ ಹಣ ಬೇಕು ಅನ್ನುವುದು ನನ್ನ ಭಾವನೆ ಇದೆ. ಇದರ ಬಗ್ಗೆ ನಾನು ಹಣಕಾಸು ಸಚಿವರಾದ ಉಪ ಮುಖ್ಯಮಂತ್ರಿ ಮಾನ್ಯ ಯಡಿಯೂರಪ್ಪನವರ ಜೊತೆ ಚರ್ಚೆ ಮಾಡುತ್ತೇನೆ ಏಕೆಂದರೆ ಈಗಾಗಲೇ ಬಜೆಟ್‌ನಲ್ಲಿ

ಹಣ ಬಿಡುಗಡೆ ಮಾಡಿದ್ದಾರೆ. ಮುಂದಿನ ಬಜೆಟ್‌ನಲ್ಲಿ ಅದರೂ ಹಣ ಹೆಚ್ಚು ಮಾಡಲಿಕ್ಕೆ ಪ್ರಾಮಾಣಿಕವಾದ ಪ್ರಯತ್ನ ಸರ್ಕಾರ ಮಾಡುತ್ತದೆ ಎಂದು ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಶ್ರೀ ಕೆ.ಎನ್. ರಾಜಣ್ಣ : ಮಾನ್ಯ ಅಧ್ಯಕ್ಷರೇ, ನಾನು ಕೇಳಿರತಕ್ಕಂಥ ಪ್ರಶ್ನೆ ರಾಜ್ಯ ವಲಯದಲ್ಲಿ ಮಾಡತಕ್ಕಂಥಾದ್ದು, ಜಿಲ್ಲಾ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಮಾಡತಕ್ಕಂಥಾದ್ದು ಜಿಲ್ಲಾ ವಲಯದಲ್ಲಿ ಬರತಕ್ಕಂಥ ಹಣಕಾಸಿನಲ್ಲಿ ಅವರು ಮಾಡುತ್ತಾರೆ. ನಾನು ರಾಜ್ಯ ವಲಯದಲ್ಲಿ ಎಷ್ಟು ಹಣ ಈ ಉದ್ದೇಶಕ್ಕಾಗಿ ಇಟ್ಟಿದ್ದೀರಿ ಎನ್ನುವುದು ನನ್ನ ಪ್ರಶ್ನೆ. ನನ್ನ ಉದ್ದೇಶ ಏನೆಂದರೆ ಅನಾವಶ್ಯಕವಾಗಿ ಹಣ ದುರುಪಯೋಗ ಆಗತಕ್ಕದ್ದು, ಅಂದರೆ ಟೈಸಿಂಗ್ ಅಂಥದ್ದು ಇಂಥದ್ದು ಅಂತ ಏನಿವೆ ಅದಕ್ಕಾಗಿ ಸುಮಾರು 80 ಕೋಟಿ ರೂ.ಗಳನ್ನು ಈ ವರ್ಷದ ಬಜೆಟ್‌ನಲ್ಲಿ ಮೀಸಲಿರಿಸಿದ್ದೀರಿ. ಅಲ್ಲಿ ಕಡಿಮೆ ಮಾಡಿ ಇಲ್ಲಿ ಹೆಚ್ಚು ಮಾಡಿಕೊಡಿ. ಹೊಸ ಬಜೆಟ್ಟು ಹೊಸ ಹಣವನ್ನು ನೀವು ಹಣಕಾಸು ಸಚಿವರನ್ನು ಕೇಳಿ ಕೊಡಿಸುವ ಪ್ರಶ್ನೆ ಅಲ್ಲ. ನೀವು ಕಂಪ್ಯೂಟರ್ ತರಬೇತಿ ಅಂತೀರಿ; ಯಾವ ಸಂಸ್ಥೆಗಳು ಅವು ಎಲ್ಲಿವೆ ಅಂತ ಗೊತ್ತಾಗುವುದೇ ಇಲ್ಲ. ಆದ್ದರಿಂದ ಹಳ್ಳಿಗಾಡಿನ ಹರಿಜನ ಕೇರಿಗಳ ಅಭಿವೃದ್ಧಿಗೆ ಅನಾವಶ್ಯಕವಾಗಿ ಖರ್ಚು ಮಾಡುವ ಹಣವನ್ನು ಕ್ರೋಢೀಕರಿಸಿ ಇಲ್ಲಿ ಖರ್ಚು ಮಾಡುವ ಪ್ರಯತ್ನ ಮಾಡಿ ಅಂತ ನಾನು ಈ ಪ್ರಶ್ನೆ ಹಾಕಿದ್ದು.

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ : ಅಧ್ಯಕ್ಷರೇ, ಏನು 80 ಕೋಟಿ ರೂ. ಇಟ್ಟಿದ್ದೇವೆ ಆ ದುಡ್ಡನ್ನು ಇದಕ್ಕೆ ಡೈವರ್ಟ್ ಮಾಡಿಕೊಡಬೇಕೆಂದು; ಆದರೆ ಕೆಲವೊಂದು ಉದ್ದೇಶಕ್ಕೆ ಖರ್ಚು ಮಾಡಬೇಕೆಂದು ಆ ದುಡ್ಡು ಇಟ್ಟಿರುವುದು. ಆ ದುಡ್ಡಿನಿಂದ ತೆಗೆದು ಖರ್ಚು ಮಾಡಲಿಕ್ಕೆ ಸರ್ಕಾರ ಪರಿಶೀಲನೆ ಮಾಡುತ್ತದೆಂದು ಆಶ್ವಾಸನೆ ಕೊಡುತ್ತೇನೆ.

ಶ್ರೀ ಹಂಪನಗೌಡ ಬಾದರ್ಲಿ : ಅಧ್ಯಕ್ಷರೇ, ರಾಜ್ಯ ಸರ್ಕಾರ ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಲಿಗೆ ವರ್ಷಕ್ಕೆ 14 ಕೋಟಿ ರೂ ವಿಶೇಷ ಘಟಕದಡಿ ಕೊಡುತ್ತದೆ. ಆ ದುಡ್ಡನ್ನು ಆ ಐದು ಜಿಲ್ಲೆಗಳಿಗೆ ಖರ್ಚುಮಾಡಬೇಕೆಂಬುದು ವಿಚಾರ. ಸರ್ಕಾರ ಮಧ್ಯದಲ್ಲಿ ಆ ಹಣ ವಾಪಸ್ ಪಡೆದು ಇಡೀ ರಾಜ್ಯಕ್ಕೆ ಹಂಚುವ ಕೆಲಸ ಮಾಡಿದೆ; ಅದನ್ನು ಐದು ಜಿಲ್ಲೆಗಳಿಗೇ ಕೊಡುವ ವ್ಯವಸ್ಥೆ ಮಾಡಬೇಕು. ಏಕೆಂದರೆ ಅತ್ಯಂತ ಹಿಂದುಳಿದಿರುವುದು ನಮ್ಮ ಭಾಗ. ಅಲ್ಲಿನ ಪೂಲ್ ಅಮೌಂಟನ್ನು ರಾಜ್ಯ ಸರ್ಕಾರ ವಾಪಸ್ಸು ತೆಗೆದುಕೊಂಡು ಇಡೀ 27 ಜಿಲ್ಲೆಗಳಿಗೆ ಹಂಚುತ್ತೇವೆ ಅಂದರೆ ಹಿಂದುಳಿದಿರುವ ಭಾಗಗಳು ಮುಂದೆ ಬರುವುದು ಯಾವಾಗ? ಅದನ್ನು ಗಮನಹರಿಸಿ ನಂಬುಂಡಪ್ಪ ವರದಿ ಆಧಾರದ ಮೇಲೆ ಅಲ್ಲಿಗೆ ಕೊಟ್ಟ ಹಣವನ್ನು ಅತ್ಯಂತ ಹಿಂದುಳಿದ

ತಾಲ್ಲೂಕುಗಳೇನಿವೆ, ಅಲ್ಲಿನ ಹರಿಜನವಾಡಕ್ಕೆ ಖರ್ಚುಮಾಡುದ ವ್ಯವಸ್ಥೆಯನ್ನು ಮಾಡುವ ಇಚ್ಛೆ ಸರ್ಕಾರಕ್ಕೆ ಇದೆಯೋ ಇಲ್ಲವೋ ಎಂಬ ವಿಚಾರ ತಾವು ಹೇಳಬೇಕು.

ಡಾ॥ ಕೆ. ಅನ್ನದಾನಿ : ಅಧ್ಯಕ್ಷರೇ, ರಾಜ್ಯಾಂಗದಲ್ಲಿ ಹರಿಜನ ಎಂಬ ಪದವನ್ನು ಬಳಸಬಾರದು ಅಂತ ಇದೆ. ಪದೇ ಪದೇ ಕಾನೂನು ಗೊತ್ತಿರುವವರು ನಾವು ಸದನದಲ್ಲಿ ಹರಿಜನ ಅಂತ ಸರ್ಕಾರವೇ ಪ್ರಿಂಟ್ ಮಾಡಿದೆ. ದಯಮಾಡಿ ಅದನ್ನು ಬಳಸಬಾರದು. ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗ ಅಂತ ಬಳಸಬೇಕು.

ಉಪಾಧ್ಯಕ್ಷರು : ಆಗಲಿ ಇನ್ನೂ ಮುಂದೆ ಆ ತರಹ ಮಾಡಬಾರದು.

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ : ಸದಸ್ಯರು ಹೈದರಾಬಾದ್ ಕರ್ನಾಟಕ ಅಭಿವೃದ್ಧಿಗೆಂದು ಇಟ್ಟಿದ್ದ ದುಡ್ಡನ್ನು ಪೂಲ್‌ಮನಿಯನ್ನು ಸರ್ಕಾರ ವಾಪಸ್ಸು ಪಡೆದುಕೊಂಡಿದೆ ಎಂದು ಸದಸ್ಯರು ಹೇಳಿದರು. ಇದರ ಬಗ್ಗೆ ಅಧಿಕಾರಿಗಳ ಜತೆ ಚರ್ಚೆ ಮಾಡಿ ಪರಿಶೀಲಿಸಿ ಕ್ರಮ ತೆಗೆದುಕೊಳ್ಳಲಾಗುವುದು. ಹಾಗೆಯೇ ಸದಸ್ಯರಾದ ಡಾ॥ ಅನ್ನದಾನಿಯವರು ಹೇಳಿದ್ದರ ಬಗ್ಗೆ, ಇನ್ನು ಮುಂದೆ ನನ್ನ ಇಲಾಖೆಯಿಂದ ಎಲ್ಲೂ ಹರಿಜನ ಪದ ಬಳಸಬಾರದು ಅಂತ, ಪರಿಶಿಷ್ಟ ಜಾತಿ ಅಂತ ಬಳಸಬೇಕೆಂದು ತಿಳಿಸಲು ಇಷ್ಟಪಡುತ್ತೇನೆ.

ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಡಿ. ಎಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು) : ಅಧ್ಯಕ್ಷರೇ, ದಿನಾಂಕ: 13–7–2006ರಂದು 22ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 27 ಪ್ರಶ್ನೆಗಳ ಪೈಕಿ 24 ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ. (ಅನುಬಂಧ–1)

ಉಪಾಧ್ಯಕ್ಷರು : ಮಂಡಿಸಲಾಯಿತು.

7. ಪ್ರಕಟಣೆ

ಉಪಾಧ್ಯಕ್ಷರು : ಈಗ ಒಂದು ಪ್ರಕಟಣೆ.

ದಿನಾಂಕ 13.7.2006 ರಂದು ನಡೆದ ವಿಧಾನಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯಲ್ಲಿ ಹಾಲಿ ನಡೆಯುತ್ತಿರುವ ಅಧಿವೇಶನವನ್ನು ಮುಂದುವರೆಸಿ ದಿನಾಂಕ 17,18 ಹಾಗೂ 19ರಂದು ನಡೆಸಲು ತೀರ್ಮಾನಿಸಲಾಗಿದೆ. ದಿನಾಂಕ 17,18 ಹಾಗೂ 19ರಂದು 2006–07ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆಯನ್ನು ನಡೆಸಿ ಅಂಗೀಕಾರವನ್ನು ಪಡೆಯಲಾಗುವುದು.

ಈಗ ಸದನವನ್ನು ನಾಳೆ ಬೆಳಿಗ್ಗೆ 10.00 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.